

ಕಣ್ಣಿಟ್ಟಿರ್ತಾನೆ. ಯಾವತ್ತಾದರೂ ನಾನೊಬ್ಬಳೇ ಹೊಲದಿಂದ ಮೇವು ತರಲು ಹೋದರೆ ಸಾಕು, ನನ್ನ ಗಂಡನ ಹತ್ತು ವರ್ಷದ ತಂಗಿ ನನ್ನನ್ನು ನೆರಳಿನಂತೆ ಹಿಂಬಾಲಿಸ್ತಾಳೆ. ನಾನು ದಾರಿಯಲ್ಲಿ ಯಾರೊಂದಿಗಾದರೂ ನಕ್ಕರೆ, ಇಲ್ಲಾ ಮಾತಾಡಿದರೆ ಸಾಕು, ಅವಳು ಅದನ್ನೇ ಗುಡ್ಡಮಾಡಿ ಅವಳ ಅಣ್ಣನಿಗೆ ವರದಿ ಮಾಡ್ತಾಳೆ. ಅವನಾದರೋ ಅವಳನ್ನು ಇಲ್ಲಸಲ್ಲದ ಪ್ರಶ್ನೆಗಳನ್ನು ಕೇಳಿ ದೊಡ್ಡ ರಾದ್ಧಾಂತವನ್ನೇ ಮಾಡಿಬಿಡ್ತಾನೆ. ಆ ಮೇಲೆ, ಅ ನೀಚ ನನ್ನ ಮೇಲೆ ಹೆಂಗೆ ಬೀಳ್ತಾನೆ ಅಂದರೆ...' ಹೀಗೆ ಹೇಳುತ್ತಿರುವ ಅವಳ ಕೆಂಪಾದ ಕಣ್ಣುಗಳು ಒಂದೇ ಸಮ ಕಣ್ಣೀರನ್ನು ಸುರಿಸುತ್ತಿದ್ದವು. ಆ ದೃಶ್ಯ 'ಸರಕ್ಕನೆ ಕಸಿದುಕೊಂಡಾಗ ಕಿತ್ತುಹೋದ ಕೊರಳ ಹಾರದ ಮಣಿಗಳ' ಹಾಗೆ ಕಾಣುತ್ತಿತ್ತು.